ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ **1096/2020**

ಪಿಡಬ್ಲ್ಯುಃ - **5**
ಸಿಡಬ್ಲ್ಯುಃ - **6**

ದಿನಾಂಕಃ **04.10.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ಪುರುಷೋತ್ತಮ |
| ತಂದೆಯ ಹೆಸರು | - | ಜೋಸೆಫ್ |
| ವಯಸ್ಸು | - | 55 ವರ್ಷ |
| ವೃತ್ತಿ | - | ಕೂಲಿ ಕೆಲಸ |
| ವಾಸಸ್ಥಳ | - | ಹಾಕತ್ತೂರು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-1 ರಿಂದ 3 ಗೊತ್ತು. ಅವರು ನಮ್ಮ ಊರಿನವರು. ಆರೋಪಿತರು ಗೊತ್ತು, ಅವರು ನಮ್ಮ ಊರಿನವರೇ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲ. ಆದರೆ ಚಾಸಾ-1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ. ಚಾಸಾ-1 ರವರು ನನಗೆ ಹುಷಾರಿಲ್ಲ ಎಂದು ಹೇಳಿ ನನ್ನನ್ನು ಆಸ್ಪತ್ರೆಗೆ ಸೇರಿಸು ಎಂದು ಕೇಳಿದ್ದಕ್ಕೆ ನಾನು ಆಸ್ಪತ್ರೆಗೆ ಸೇರಿಸಿದ್ದೇನೆ. ಕಳೆದ ವರ್ಷ ನಾನು ಚಾಸಾ-1 ರವರನ್ನು ಏಪ್ರಿಲ್ ತಿಂಗಳಲ್ಲಿ ಆಸ್ಪತ್ರೆಗೆ ಸೇರಿಸಿದ್ದೇನೆ. ಈ ಪ್ರಕರಣದಲ್ಲಿ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ-

ದಿಃ 06.08.2020 ರ ಬೆಳಿಗ್ಗೆ 7.30 ರ ಸಮಯದಲ್ಲಿ ನಾನು ನಮ್ಮ ಊರಿನ ಲಿಂಗಪ್ಪರವರ ಮನೆಯ ಮುಂದೆ ನಡೆದು ಹೋಗುವಾಗ ಕಾಫಿ ತೋಟದಲ್ಲಿ ಜಗಳದ ಸದ್ದು ಕೇಳಿಸಿತು ಎಂದರೆ ಸರಿಯಲ್ಲ. ಆರೋಪಿತರೆಲ್ಲಾ ಚಾಸಾ-1 ರವರ ಜೊತೆ ಜಗಳ ಆಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-2 ರವರು ಅಲ್ಲೇ ಇದ್ದು ನಾನು ಘಟನೆಯ ಬಗ್ಗೆ ಆಕೆಯನ್ನು ವಿಚಾರಿಸಿದ್ದೇನೆ ಎಂದರೆ ಸರಿಯಲ್ಲ. ಆಗ

ಪ್ರೇಮಾರವರು ಆರೋಪಿತರು ಚರಂಡಿ ಮುಚ್ಚಿ ದ ಬಗ್ಗೆ ಹಾಗೂ ಅದನ್ನು ಕೇಳಿದ್ದಕ್ಕೆ ಚಾಸಾ-1 ರವರನ್ನು ಬೈದು ಹಲ್ಲೆ ಮಾಡಿದ ಬಗ್ಗೆ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿತರು ಗುದ್ದಲಿಯಿಂದ ಚಾಸಾ-1 ರವರ ಎಡ ಕಾಲಿಗೆ ಹೊಡೆದು ಗಾಯಪಡಿಸಿದರು ಎಂದು ಹಾಗೂ ಕೊಲೆ ಬೆದರಿಕೆ ಹಾಕಿದರು ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾನು ಚಾಸಾ-1 ರವರನ್ನು ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ 08.08.2020 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲ ಗಳೆದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರ ವಿಚಾರ ತಿಳಿದಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ - ಇಲ್ಲ.

ಮರು ವಿಚಾರಣೆಃ - ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ